ದಿನಾಂಕ: 19.03.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೊದಿಸಲಾಯಿತು.

**ಪಾಟಿಸವಾಲು: ಶ್ರೀ.ಪಿ.ಪಿ.ಎನ್. ವಕೀಲರಿಂದ 3 ನೇ ಪ್ರತಿವಾದಿ ಪರವಾಗಿ.**

ನಾನು ಒಟ್ಟು 7 ಎಕರೆಗೆ ಸಂಬಂಧಿಸಿದಂತೆ ಪಾಲಿ ಕೊರಿ ಈ ದಾವೆ ಮಾಡಿರುತ್ತೇನೆ. ಸದರಿ ಜಮೀನುಗಳು ಪಡಸಲಗಿ ಗ್ರಾಮದಲ್ಲಿದ್ದು, ನೀರಾವರಿ ಜಮೀನುಗಳಾಗಿರುತ್ತದೆ. ಸದರಿ ಜಮೀನುಗಳನ್ನು ಒಂದು ತಿಂಗಳ ಮುಂಚೆ ನೋಡಿರುತ್ತೇನೆ. ಸದರಿ ಜಮೀನುಗಳಲ್ಲಿ ಕಬ್ಬು ಬೆಳೆ ಇದೆ. ಒಂದು ಜಮೀನನ್ನು 1 ನೇ ಪ್ರತಿವಾದಿ ಮತ್ತು ಇನ್ನೊಂದನ್ನು 3 ನೇ ಪ್ರತಿವಾದಿ ಸಾಗುವಳಿ ಮಾಡುತ್ತಾರೆ. ನನ್ನ ತಂದೆಯ ಜೊತೆಗೆ ನನ್ನ ಸಂಬಂಧ ಚೆನ್ನಾಗಿದ್ದು, ಆಗಾಗ ಹೋಗಿ ಬಂದು ಮಾಡುತ್ತೇನೆಂದರೆ ಸರಿ. ಈ ದಾವೆಯನ್ನು 1 ನೇ ಪ್ರತಿವಾದಿಯೇ ಮಾಡುವಂತೆ ನನಗೆ ಹೇಳಿರುತ್ತಾರೆ. ಅದರಂತೆ ನಾನು ಈ ದಾವೆ ಮಾಡಿರುತ್ತೇನೆ. ದಾವೆಗೆ ಮಾಹಿತಿ ಕೊಡಲು 1 ನೇ ಪ್ರತಿವಾದಿ ಬಂದಿದ್ದರು ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನಮ್ಮ ಅಜ್ಜ ಭೀಮಪ್ಪನಿಂದ ಬಂದಿರುತ್ತವೆ. ಆ ಬಗ್ಗೆ ಯಾವ ದಾಖಲೆಗಳನ್ನು ಹಾಜರುಪಡಿಸಿದ್ದೀರಿ ಎಂದರೆ ಸಾಕ್ಷಿ ನಾನು ಶಾಲೆ ಕಲಿತಿಲ್ಲ, ವಕೀಲರು ತೆಗೆಸಿರುತ್ತಾರೆಂದು ನುಡಿಯುವರು. ನಮ್ಮ ಮನೆತನಕ್ಕೆ ನಾಗನೂರ ಗ್ರಾಮದಲ್ಲಿ 4 ಎಕರೆ 20 ಜಮೀನು ಇದೆ ಎಂದರೆ ಸರಿ. ಸದರಿ ಜಮೀನು ನನ್ನ ತಂದೆ ಹಾಗೂ ಇತರರ ಜೊತೆಯಲ್ಲಿ ಜಂಟಿಯಾಗಿದೆ ಎಂದರೆ ಸರಿ. ಎಲ್ಲರೂ ಪಕ್ಷಗಾರರನ್ನಾಗಿ ಮಾಡಬೇಕಾಗುತ್ತದೆಂಬ ಉದ್ದೇಶದಿಂದ ಸದರಿ ಆಸ್ತಿಯನ್ನು ಈ ದಾವೆಯಲ್ಲಿ ಕಾಣಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ.

2005 ನೇ ಸಾಲಿನಲ್ಲಿ ನಮ್ಮ ಮನೆತನಕ್ಕೆ ಸಂಬಂಧಿಸಿದ ಆಸ್ತಿಗಳಲ್ಲಿ ನೋಂದಾಯಿತ ಪಾಲುವಾಟ್ನಿಯಾಗಿದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಪಾಲುವಾಟ್ನಿಯಲ್ಲಿ ನನ್ನ ತಂಗಿ 4 ನೇ ಪ್ರತಿವಾದಿಗೆ 1 ಎ-30 ಗು ಮತ್ತು 1 ನೇ ಪ್ರತಿವಾದಿಗೆ 1 ಎ-29 ಗು ಜಮೀನು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಅದರಂತೆ ಮ್ಯೂಟೇಶನ ನಂ. 167/2005-06 ರಂತೆ 1 & 4 ನೇ ಪ್ರತಿವಾದಿಯ ಹೆಸರು ನಮೂದಾಗಿದೆ ಎಂದರೆ ಸರಿ. ಅದರಂತೆ ಸದರಿ ಜಮೀನುಗಳ ಸ್ವಾಧೀನಾನುಭವದಲ್ಲಿದ್ದಾರೆಂದರೆ ಸರಿ. ಆದ್ದರಿಂದ ಸದರಿ ಆಸ್ತಿಗಳು ಅವರ ಸ್ವಯಾರ್ಜಿತ ಆಸ್ತಿಗಳಾದವು ಎಂದರೆ ಸರಿ. 2005 ರಲ್ಲಿ ಆದ ಪಾಲುವಾಟ್ನಿಯನ್ನು ಎಲ್ಲಿಯೂ ಪ್ರಶ್ನಿಸಿಲ್ಲ. ನಂತರ 2015 ರಲ್ಲಿ 1 ನೇ ಪ್ರತಿವಾದಿಗೆ ಬಂದಂತಹ

ಅ.ದಾ.ನಂ.108/2022
ಪಿ.ಡಬ್ಲು-1

ಆಸ್ತಿಗಳನ್ನು 3 ನೇ ಪ್ರತಿವಾದಿಗೆ ಬಿಟ್ಟುಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ. ಆ ಪ್ರಕಾರ ಆಸ್ತಿಗಳು 3 ನೇ ಪ್ರತಿವಾದಿಯ ಹೆಸರಿಗೆ ದಾಖಲಾಗಿರುತ್ತವೆಂದರೆ ಸರಿ. ಅದರಂತೆ ಎಮ್.ಆರ್.ನಂ. 198/2014-15 ದಾಖಲಾಗಿದ್ದು, ಸದರಿ ಎಮ್.ಆರ್ ನ್ನು ಪ್ರಶ್ನಿಸಿ ನಾನು ಎಲ್ಲಿಯೂ ಮೇಲ್ಮನವಿ ಸಲ್ಲಿಸಿಲ್ಲ. ಆದ್ದರಿಂದ ಸದರಿ ಆಸ್ತಿಗಳು 3 ನೇ ಪ್ರತಿವಾದಿಯ ಸ್ವಯಾರ್ಜಿತ ಆಸ್ತಿಗಳಾಗಿರುತ್ತವೆಂದರೆ ಸರಿ. ಸದರಿ ಆಸ್ತಿಯಲ್ಲಿ 3 ನೇ ಪ್ರತಿವಾದಿ ಕಬ್ಬು ಬೆಳೆದು ಕಬ್ಬನ್ನು ಜಮಖಂಡಿ ಶುಗರ್ಸ ಹಿರೆಪಡಸಲಗಿ ಕಾರ್ಖಾನೆಗೆ ಕಳುಹಿಸುತ್ತಾನೆಂದರೆ ಸರಿ. 1 ನೇ ಪ್ರತಿವಾದಿ ತನ್ನ ಸ್ವ-ಇಚ್ಛೆಯಿಂದ ನಮ್ಮೆಲ್ಲರ ಸಮ್ಮತಿಯಂತೆ 3 ನೇ ಪ್ರತಿವಾದಿಯ ಹೆಸರಿಗೆ ತಮ್ಮ ಆಸ್ತಿಗಳನ್ನು ಬಿಟ್ಟುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಪಡಸಲಗಿ ಗ್ರಾಮದಲ್ಲಿನ ಮನೆಯನ್ನು ಈ ದಾವೆಯಲ್ಲಿ ಸೇರಿಸಿಲ್ಲ ಎಂದರೆ ಸರಿ.

ನನ್ನ ಮದುವೆಯಾಗಿ 40 ವರ್ಷವಾಗಿದೆ. ನನ್ನನ್ನು ಒಳ್ಳೆಯ ಮನೆತನಕ್ಕೆ ಕೊಟ್ಟು ಮದುವೆ ಮಾಡಿದ್ದು, ಆ ಸಮಯಕ್ಕೆ ಸಾಕಷ್ಟು ಬಂಗಾರ, ಹಣ ಕೊಟ್ಟು ಅದ್ಧೂರಿಯಾಗಿ ಮದುವೆ ಮಾಡಿರುತ್ತಾರೆಂದರೆ ಸರಿಯಲ್ಲ. ನಮ್ಮ ಮೆನತನದಲ್ಲಿಯ ಎಲ್ಲಾ ಆಸ್ತಿಗಳಲ್ಲಿ ಈಗಾಗಲೇ ಪಾಲುವಾಟ್ನಿಯಾಗಿದ್ದು, ಪಾಲುವಾಟ್ನಿ ಮಾಡಿಕೊಳ್ಳಲು ಯಾವುದೇ ಆಸ್ತಿಗಳು ಉಳಿದಿಲ್ಲ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿ ಖೊಟ್ಟಿ ದಾಖಲೆಗಳನ್ನು ಸೃಷ್ಟಿಸಿ ತನ್ನ ಹೆಸರಿಗೆ ದಾವಾ ಆಸ್ತಿಗಳನ್ನು ಮಾಡಿಕೊಂಡಿರುತ್ತಾನೆಂದು ಸುಳ್ಳು ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು, ನನ್ನ ತಾಯಿ, ತಂಗಿ ಎಲ್ಲರೂ ಮಿಲಾಪೆಯಾಗಿ ಖೊಟ್ಟಿ ದಾವೆ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

<u>ಮರುವಿಚಾರಣೆ: ಇಲ್ಲ.</u>

[ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.]
ಓ.ಹೇ.ಕೇ.ಸರಿ ಇದೆ.

ಸಹಿ/-
ಹೆಚ್ಚುವರಿ ದಿವಾಣಿ ನ್ಯಾಯಾಧೀಶರು,
ಜಮಖಂಡಿ.